# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org


ಸಂಖ್ಯೆ:SHQ/ORG.1/Letter/2025-26 -702 ದಿನಾಂಕ:16.07.2026

ಎಲ್ಲಾ ಜಿಲ್ಲಾ ಕಾರ್ಯದರ್ಶಿಯವರುಗಳಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ಕರ್ನಾಟಕ.

ಮಾನ್ಯರೆ,

ವಿಷಯ:- ದಿನಾಂಕ: 7 ಮತ್ತು 8 ಆಗಸ್ಟ್ 2026ರಂದು ಆಳ್ವಾಸ್ ಕ್ಯಾಂಪಸ್, ವಿದ್ಯಾಗಿರಿ, ಮೂಡಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ **"ಬೃಹತ್ ಉದ್ಯೋಗ ಮೇಳ"**ದಲ್ಲಿ ನಮ್ಮ ಸ್ಕೌಟ್-ಗೈಡ್ಸ್ ಸಂಸ್ಥೆಯ ಉದ್ಯೋಗಾಸಕ್ತರುಗಳು ಭಾಗವಹಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ. ವಿವೇಕ್ ಆಳ್ವ, ಮ್ಯಾನೇಜಿಂಗ್ ಟ್ರಸ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮೂಡಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ ಇವರು ಗುಣಮಟ್ಟದ ಶಿಕ್ಷಣ, ವ್ಯಕ್ತಿತ್ವ ವಿಕಸನ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗವಕಾಶಗಳ ಸೃಷ್ಟಿಗೆ ಪೂರಕವಾದ ಅನೇಕ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಂಡು ಬರುತ್ತಿರುವರು. ಅವುಗಳಲ್ಲಿ **"ಆಳ್ವಾಸ್ ಪ್ರಗತಿ ಬೃಹತ್ ಉದ್ಯೋಗ ಮೇಳ"**ವು ಪ್ರತಿಷ್ಠಾನದ ಸಾಮಾಜಿಕ ಬದ್ಧತೆ ಮತ್ತು ಯುವ ಜನರ ಉದ್ಯೋಗ ಸಬಲೀಕರಣದ ಸಂಕಲ್ಪವನ್ನು ಸಾಕಾರಗೊಳಿಸುವುದು ಅವರ ಪ್ರಮುಖ ಕಾರ್ಯಕ್ರಮವಾಗಿದೆ.

ಈಗಾಗಲೇ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ ನಿರಂತರವಾಗಿ 23ಕ್ಕೂ ಅಧಿಕ ಬೃಹತ್ ಉದ್ಯೋಗ ಮೇಳಗಳ ಮೂಲಕ 40,848ಕ್ಕೂ ಹೆಚ್ಚು ಅಭ್ಯರ್ಥಿಗಳು ನೇರ ಉದ್ಯೋಗ ಪಡೆದಿದ್ದು, 66432ಕ್ಕು ಅಧಿಕ ಅಭ್ಯರ್ಥಿಗಳು ವಿವಿಧ ಪ್ರತಿಷ್ಠಿತ ಕಂಪನಿಗಳ ಮುಂದಿನ ಹಂತದ ನೇಮಕಾತಿ ಪ್ರಕ್ರಿಯೆಗೆ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯವಾಗಿದೆ.

ಪ್ರಸಕ್ತ ಸಾಲಿನಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ **ದಿನಾಂಕ: 7 ಮತ್ತು 8 ಆಗಸ್ಟ್ 2026ರಂದು ಆಳ್ವಾಸ್ ಕ್ಯಾಂಪಸ್, ವಿದ್ಯಾಗಿರಿ, ಮೂಡಬಿದಿರೆ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ "ಬೃಹತ್ ಉದ್ಯೋಗ ಮೇಳ"**ವನ್ನು ನಡೆಸಲಿದ್ದಾರೆ. ಈ ಉದ್ಯೋಗ ಮೇಳದಲ್ಲಿ 300ಕ್ಕು ಅಧಿಕ ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದ್ದು, ಪದವೀಧರರು, ಸ್ನಾತಕೋತ್ತರ ಪದವೀಧರರು, ಡಿಪ್ಲೋಮ, ಐಟಿಐ ಹಾಗೂ ಇತರ ಅರ್ಹ ಅಭ್ಯರ್ಥಿಗಳಿಗೆ ವ್ಯಾಪಕ ಉದ್ಯೋಗವಕಾಶಗಳನ್ನು ನೀಡಲಿದ್ದಾರೆ. ಈ ಮೇಳದಲ್ಲಿ ಭಾಗವಹಿಸುವವರಿಗೆ ನೊಂದಾವಣಿ ಉಚಿತವಾಗಿರುವುದು ಮತ್ತು ಹೊರ ಜಿಲ್ಲೆಗಳು ಹಾಗೂ ದೂರದ ಊರುಗಳಿಂದ ಆಗಮಿಸುವ ಉದ್ಯೋಗಾಸಕ್ತರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಲಿದ್ದಾರೆ ಮತ್ತು ಊಟೋಪಚಾರ & ಹೋಗಿ-ಬರುವ ಪ್ರಯಾಣ ಭತ್ಯೆಯನ್ನು ಭಾಗವಹಿಸುವ ಅಭ್ಯರ್ಥಿಗಳು ಭರಿಸಿಕೊಳ್ಳುವುದು ಎಂಬುದನ್ನು ಈ ಮೂಲಕ ತಿಳಿಸಲಾಗಿದೆ. **ಈ ಮೇಳದಲ್ಲಿ ನಮ್ಮ ಸಂಸ್ಥೆಯ ಸ್ಕೌಟ್ಸ್-ಗೈಡ್ಸ್‌ನವರಿಗೆ ಹೆಚ್ಚಿನ ಉದ್ಯೋಗ ಮೇಳದ ಪ್ರಯೋಜನವನ್ನು ಪಡೆದುಕೊಳ್ಳುವಂತೆ ವಿನಂತಿಸಿರುತ್ತಾರೆ.**

ಆದ್ದರಿಂದ, ತಾವು ತಮ್ಮ **ಜಿಲ್ಲೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಇರುವ ಸ್ಕೌಟ್ಸ್-ಗೈಡ್ಸ್‌ನ ಪದವೀಧರರು, ಸ್ನಾತಕೋತ್ತರ ಪದವೀಧರರು, ಡಿಪ್ಲೋಮ, ಐಟಿಐ ಹಾಗೂ ಇತರ ಅರ್ಹ ಉದ್ಯೋಗಾಸಕ್ತಿರುಗಳಿಗೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ ದಿನಾಂಕ: 7 ಮತ್ತು 8 ಆಗಸ್ಟ್ 2026ರಂದು ನಡೆಸಲಿರುವ ಈ ಬೃಹತ್ ಉದ್ಯೋಗ ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಿಳಿಸಬೇಕಾಗಿ ಕೋರಲಾಗಿದೆ ಮತ್ತು ಈ ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು https://alvaspragati.com/candidate-registration ಈ ಲಿಂಕ್‌ನಲ್ಲಿ ರಿಜಿಸ್ಟ್ರೇಷನ್ ಮಾಡಿಸಬೇಕಾಗಿ ತಿಳಿಸಿದೆ.** ಈ ಉದ್ಯೋಗ ಮೇಳದಲ್ಲಿ ಯಾರು ಭಾಗವಹಿಸುವುದು ಎಂಬುದರ ಪೋಸ್ಟರ್‌ಅನ್ನು ಸಹ ಇದರೊಂದಿಗೆ ಲಗತ್ತಿಸಲಾಗಿದೆ ಕಳುಹಿಸಲಾಗಿದೆ.

ಸ್ಕೌಟ್-ಗೈಡ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ರಾಜ್ಯ ಮುಖ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ

(ಕೆ. ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿ

ಪ್ರತಿಯನ್ನು ಮಾಹಿತಿಗಾಗಿ: ಎಎಸ್‌ಒಸಿ/ಡಿಒ/ಡಿಒಟಿ/ಎಸ್‌ಜಿವಿ/ಎಸ್‌ಜಿಎಗಳ ಸೂಕ್ತ ಕ್ರಮಕ್ಕಾಗಿ

# ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ (ರಿ.)

ಮೂಡುಬಿದಿರೆ - 574227

**ಆಗಸ್ಟ್ 2026 07 - 08**



# ಆಳ್ವಾಸ್ ಪ್ರಗತಿ

ಬೃಹತ್ ಉದ್ಯೋಗ ಮೇಳ

**2026**

16ನೇ ಆವೃತ್ತಿ

## ಯಾರು ಭಾಗವಹಿಸಬಹುದು?

- ಐಟಿಐ
- ಡಿಪ್ಲೊಮಾ
- ಪಿಯುಸಿ
- ಎಸ್‌ಎಸ್‌ಎಲ್‌ಸಿ
- ಯಾವುದೇ ಪದವೀಧರರು
- ಸ್ನಾತಕೋತ್ತರ ಪದವೀಧರರು

**ಆಳ್ವಾಸ್ ಕ್ಯಾಂಪಸ್**

ವಿದ್ಯಾಗಿರಿ, ಮೂಡುಬಿದಿರೆ

ಉದ್ಯೋಗಾಕಾಂಕ್ಷಿಗಳಿಗೆ ಮತ್ತು ಕಂಪೆನಿಗಳಿಗೆ

## ಸಂಪೂರ್ಣ ಉಚಿತ ಉದ್ಯೋಗಮೇಳ

## ಪ್ರಮುಖ ಉದ್ಯೋಗ ಕ್ಷೇತ್ರಗಳು

- [x] IT
- [x] ITES
- [x] BANKING & FINANCE
- [x] SALES AND RETAIL
- [x] HOSPITALITY
- [x] MANUFACTURING
- [x] CONSTRUCTION
- [x] AUTOMOBILE
- [x] HEALTHCARE
- [x] PHARMACEUTICALS
- [x] MEDIA
- [x] EDUCATION & NGO
- [x] TELECOM
- [x] ELECTRONICS

+91 97414 40490
+91 96631 90590
+91 79752 23865

**300+**
ಕಂಪೆನಿಗಳು ಭಾಗವಹಿಸಲಿವೆ

ಕಡ್ಡಾಯ ಮತ್ತು ಉಚಿತ ನೋಂದಣಿ

**www.alvaspragati.com**